ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಚೆನ್ನೈ ನಗರದ ಕಪಾಲೀಶ್ವರ ದೇವಸ್ಥಾನದಲ್ಲಿ ಆಶ್ರಯ ಪಡೆದ ಮುಸ್ಲಿಮರು. ಮುಸ್ಲಿಮರಿಗೆ ಆಶ್ರಯ ನೀಡಿದ ಹಿಂದು ದೇವಾಲಯದ ಈ ನಡೆಗೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗಿದೆ.

ಸಂಪುಟ : 37 ಸಂಚಿಕೆ : 9 ಮನ್ಮಥ–ವೃಶ್ಚಿಕ ಕಲಿಯುಗಾಬ್ದ 5117 15–12–2015 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

## ತಲೆಯ ಮೇಲಿನ ತೂಗುಗತ್ತಿ : ಜಾಗತಿಕ ಹವಾಮಾನ ಬದಲಾವಣೆ

ಒಂದು ಪ್ರದೇಶದಲ್ಲಿ ನೂರಾರು ವರ್ಷಗಳಿಂದ ಸಮಾನವಾಗಿ ನಡೆದು ಬಂದಿರುವ ಋತುಚಕ್ರವನ್ನೇ ಹವಾಮಾನ ಎನ್ನಲಾಗುವುದು. ಇದಕ್ಕನುಗುಣವಾಗಿ ಅಲ್ಲಿನ ಜೀವನಕ್ರಮ ರೂಪುಗೊಂಡಿರುತ್ತದೆ. ಆರ್ಥಿಕ ಪ್ರಗತಿಯ ಹಿಂದೆ ಬಿದ್ದಿರುವ ಮಾನವನ ಚಟುವಟಿಕೆಗಳಿಂದ ಜಾಗತಿಕ ಹವಾಮಾನದಲ್ಲಿ ಏರುಪೇರಾಗುತ್ತಿದ್ದು ಕಳೆದ ಕೆಲವು ವರ್ಷಗಳಿಂದ ಗಮನಿಸಿರುವಂತೆ ಹವಾಮಾನ ಬದಲಾವಣೆ ಮತ್ತು ತಾಪಮಾನ ಹೆಚ್ಚಳ ಪೃಥ್ವಿಯ ಭವಿಷ್ಯದ ಜೀವನಕ್ಕೆ ಕಂಟಕಪ್ರಾಯವಾಗಿದೆ.

ಹವಾಮಾನ ಬದಲಾವಣೆಯ ಪ್ರಮುಖ ಕಾರಣ ಪೃಥ್ವಿಯ ಹೊರಮೈ ತಾಪಮಾನದಲ್ಲಿ ಹೆಚ್ಚಳ. ಇಂಗಾಲಾಮ್ಲ (ಕಾರ್ಬನ್ ಡೈ ಆಕ್ಸೈಡ್), ಮೀಥೇನ್, ನೈಟ್ರಸ್ ಆಕ್ಸೈಡ್ ಮೊದಲಾದ ಅನಿಲಗಳ ಪ್ರಮಾಣ ವಾತಾವರಣದಲ್ಲಿ ಹೆಚ್ಚುವುದರಿಂದ ಪೃಥ್ವಿಯ ತಾಪಮಾನದಲ್ಲಿ ಹೆಚ್ಚಳ ಉಂಟಾಗುವುದು. ಇದನ್ನು ಹಸಿರುಮನೆ ಪರಿಣಾಮ ಎಂದು ಕರೆಯಲಾಗುತ್ತದೆ. ಹವಾಮಾನ ಬದಲಾವಣೆ ಮತ್ತು ತಾಪಮಾನದ ಹೆಚ್ಚಳದಿಂದಾಗುವ ಪರಿಣಾಮವನ್ನು ವಿಶೇಷವಾಗಿ ವಿವರಿಸಬೇಕಾಗಿಲ್ಲ. ಒಂದೆರಡು ದುಷ್ಪರಿಣಾಮಗಳೆಂದರೆ, ಧ್ರುವ ಪ್ರದೇಶ, ಹಿಮಾಲಯ ಪ್ರದೇಶಗಳ ಹಿಮಗುಡ್ಡಗಳು ಕರಗಿ ಸಮುದ್ರಮಟ್ಟ ಏರುವುದರಿಂದ ತೀರಪ್ರದೇಶದ ಬಹುದೊಡ್ಡ ಭೂಭಾಗ ಹಾಗೂ ಅನೇಕ ನಡುಗಡ್ಡೆಗಳು ಮುಳುಗಿಹೋಗುವ ಆತಂಕ ವಿಶ್ವವನ್ನು ಕಾಡುತ್ತಿದೆ. ಹವಾಮಾನದ ವೈಪರೀತ್ಯದಿಂದ ಮಳೆಯ ಹಂಚಿಕೆಯಲ್ಲಿ ಏರುಪೇರು, ಋತುಚಕ್ರದಲ್ಲಿ ಬದಲಾವಣೆ, ಅತಿವೃಷ್ಟಿ, ಅನಾವೃಷ್ಟಿ, ಆ ಮೂಲಕ ನೀರಿನ ಕೊರತೆ, ಆಹಾರೋತ್ಪಾನೆಯಲ್ಲಿ ಕಡಿತ ಮೊದಲಾದ ಸವಾಲುಗಳ ಸರಮಾಲೆ ವಿಶ್ವದೆದುರು ನಿಲ್ಲಲಿದೆ.

ಹವಾಮಾನ ಬದಲಾವಣೆಯ ಸಮಸ್ಯೆ ಜಾಗತಿಕ ಮಟ್ಟದ್ದು. ಕೈಗಾರಿಕಾ ಪ್ರಧಾನ ಐರೋಪ್ಯ ರಾಷ್ಟ್ರಗಳು, ಅರಬ್ ದೇಶಗಳು, ಅಮೇರಿಕ, ಚೀನಾ, ಕೊರಿಯ, ಜಪಾನ್, ಮೊದಲಾದ ರಾಷ್ಟ್ರಗಳು ವಾತಾವರಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಸಿರುಮನೆ ಅನಿಲಗಳನ್ನು ಸೇರಿಸುತ್ತಿದ್ದರೂ ಅದರಿಂದಾಗುವ ದುಷ್ಪರಿಣಾಮ ಕೇವಲ ಈ ದೇಶಗಳಿಗೆ ಸೀಮಿತವಾಗಿಲ್ಲ. ಆಫ್ರಿಕಾ, ಏಷ್ಯಾ ದೇಶಗಳ ಆರ್ಥಿಕವಾಗಿ ಹಿಂದುಳಿದ ದೇಶಗಳು ಜಾಗತಿಕ ಹವಾಮಾನ ಬದಲಾವಣೆಯಿಂದಾಗುವ ಪರಿಣಾಮದ ಬಲಿಪಶುಗಳಾಗುತ್ತಿವೆ.

ಆದ್ದರಿಂದ ಈ ಗಂಭೀರ ಸವಾಲನ್ನು ಎದುರಿಸಲು ವಿಶ್ವಸಮುದಾಯ ಒಟ್ಟಾಗಿ ಕೆಲಸ ಮಾಡಬೇಕಾಗಿದೆ. ಬೇಸರದ ಸಂಗತಿ ಎಂದರೆ ಕಳೆದ ಇಪ್ಪತ್ತೈದು ವರ್ಷಗಳಿಂದ ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮದ (ಯುನೈಟೆಡ್ ನೇಷನ್ಸ್ ಎನ್ವಿರಾನ್‌ಮೆಂಟ್ ಪ್ರೊಗ್ರಾಮ್) ಅಡಿಯಲ್ಲಿ ಶೃಂಗಸಭೆಗಳು ನಡೆಯುತ್ತಿದ್ದರೂ ಒಂದು ಸೂಕ್ತ ಮಾರ್ಗದರ್ಶಿ ಸೂತ್ರ ಇನ್ನೂ ಒಪ್ಪಂದ ರೂಪಕ್ಕೆ ಬಂದಿಲ್ಲ. ಕೈಗಾರಿಕಾ ಕೇಂದ್ರಿತ ಅರ್ಥವ್ಯವಸ್ಥೆಯಿಂದ ಶ್ರೀಮಂತವಾಗಿರುವ ಐರೋಪ್ಯ ದೇಶಗಳು, ಅಮೇರಿಕ, ತೈಲೋತ್ಪನ್ನಗಳಿಂದ ಶ್ರೀಮಂತ ಅರಬ್ ದೇಶಗಳು ಇನ್ನೂ ಅತಿ ಹೆಚ್ಚಿನ ಪ್ರಮಾಣದಲ್ಲಿ ವಾತಾವರಣವನ್ನು ಕಲುಷಿತಗೊಳಿಸುತ್ತಿವೆ. ಆದರೆ ಗುಲಾಮಗಿರಿಯ ಕಾಲದಲ್ಲಿ ಇವರೇ ಲೂಟಿ ಮಾಡಿದ ಏಷ್ಯಾ–ಆಫ್ರಿಕಾದ ಬಡದೇಶಗಳ ಸಮಸ್ಯೆಯನ್ನು ಪರಿಹರಿಸುವತ್ತ ಗಮನ ಹರಿಸುತ್ತಿಲ್ಲ. ಜೊತೆಗೆ ವಿಶ್ವದ ಆರ್ಥಿಕ ಶಕ್ತಿಯಾಗಿ ಮೆರೆಯುವ ಕನಸು ಕಾಣುತ್ತಿರುವ ಚೀನಾ, ಬಡತನದಲ್ಲಿರುವ ಜನಸಂಖ್ಯೆಯ ಬಹುದೊಡ್ಡ ಭಾಗವನ್ನು ಮೇಲೆತ್ತಲು ಹರಸಾಹಸಪಡುತ್ತಿರುವ ಭಾರತ, ಬ್ರೆಜಿಲ್ ಮೊದಲಾದ ದೇಶಗಳಲ್ಲಿ ವಾತಾವರಣಕ್ಕೆ ಸೇರುವ ಹಸಿರುಮನೆ ಅನಿಲಗಳ ಪ್ರಮಾಣ ಏರುತ್ತಿದೆ.

ಈ ಸಂಕಷ್ಟದಿಂದ ಹೊರಬರಲು ಮಾರ್ಗವೊಂದೇ. ಪಾಶ್ಚಾತ್ಯ ಕೊಳ್ಳುಬಾಕ ಸಂಸ್ಕೃತಿ, ಮಾರುಕಟ್ಟೆ ಆಧಾರಿತ ಜೀವನಶೈಲಿಯಿಂದ ಸರಳ ಜೀವನಶೈಲಿಯನ್ನು ಅಳವಡಿಸಿಕೊಳ್ಳುವುದು. ಪ್ರಾಕೃತಿಕ ಸಂಪನ್ಮೂಲಗಳಿರುವುದು ಕೇವಲ ಮನುಷ್ಯನ ಭೋಗಕ್ಕೆ ಮಾತ್ರವಲ್ಲ ಪ್ರತಿಯೊಂದು ಜೀವಿಯ ಬದುಕನ್ನೂ ಪೋಷಿಸಲು. ಹಾಗೆಯೇ, ಭವಿಷ್ಯದ ಪೀಳಿಗೆಗಾಗಿ ಪರಿಸರವನ್ನು ರಕ್ಷಿಸುವ ಹೊಣೆಗಾರಿಕೆ ನಮ್ಮ ಮೇಲಿದೆ ಎನ್ನುವ ಸತ್ಯವನ್ನು ಅರಿತು ನಡೆದರೆ ಮಾತ್ರ ಈ ಭೂಮಿಯ ಜೀವಜಗತ್ತು ಇನ್ನೂ ಒಂದಿಷ್ಟು ಕಾಲ ಉಳಿಯುವ ಸಾಧ್ಯತೆಯಿದೆ.



### ಪ್ಯಾರಿಸ್ ಶೃಂಗಸಭೆ

2015ನೇ ಸಾಲಿನ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಶೃಂಗಸಭೆ ಫ್ರಾನ್ಸ್ ದೇಶದ ರಾಜಧಾನಿ ಪ್ಯಾರಿಸ್‌ನಲ್ಲಿ ನವೆಂಬರ್ 30 ರಿಂದ ಡಿಸೆಂಬರ್ 11 ರವರೆಗೆ ನಡೆಯಿತು. 1992ರಲ್ಲಿ ಬ್ರೆಜಿಲ್ ದೇಶದ ರಿಯೋ–ಡೆ–ಜನರಿಯೋದಲ್ಲಿ ನಡೆದ ಅರ್ಥ್ ಸಮಿಟ್ ಹೆಸರಿನ ಶೃಂಗಸಭೆಯ ವೈಶ್ವಿಕ ಪರಿಸರ ಒಪ್ಪಂದ ಯುನೈಟೆಡ್ ನೇಷನ್ಸ್ ಫ್ರೇಮ್‌ವರ್ಕ್ ಕನ್ವೆನ್ಷನ್ ಆನ್ ಕ್ಲೈಮೇಟ್ ಛೇಂಜ್ ಅನ್ವಯ ನಡೆಯುತ್ತಿರುವ ವಾರ್ಷಿಕ ಶೃಂಗಸಭೆಯ ಇಪ್ಪತ್ತೊಂದನೇ ಆವೃತ್ತಿಯಾದ ಈ ಸಮ್ಮೇಳನದಲ್ಲಿ ವಿಶ್ವದ 196 ದೇಶಗಳು ಪಾಲ್ಗೊಂಡಿವೆ. ಜಾಗತಿಕ ಹವಾಮಾನ ಬದಲಾವಣೆ ಮತ್ತು ತಾಪಮಾನ ಹೆಚ್ಚಳವನ್ನು ನಿಗ್ರಹಿಸುವ ನಿಟ್ಟಿನಲ್ಲಿ ವೈಶ್ವಿಕ ಒಪ್ಪಂದವನ್ನು ಜಾರಿಗೆ ತರುವುದು ಈ ಸಭೆಯ ಮುಖ್ಯ ಉದ್ದೇಶವಾಗಿದೆ. ಪ್ರಮುಖವಾಗಿ ಪೆಟ್ರೋಲಿಯಂ ತೈಲ, ಕಲ್ಲಿದ್ದಲು ಮೊದಲಾದ ಪಳೆಯುಳಿಕೆ ಇಂಧನಗಳನ್ನು ಉರಿಸುವುದರಿಂದ ವಾತಾವರಣಕ್ಕೆ ಸೇರುವ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣವನ್ನು ಕಡಿತಗೊಳಿಸಿ ಸರಾಸರಿ ಜಾಗತಿಕ ತಾಪಮಾನ ಕೈಗಾರಿಕಾ ಕ್ರಾಂತಿಯ ಪೂರ್ವ ಕಾಲದ (ಅಂದರೆ 1750ನೇ ಇಸವಿಗಿಂತ ಹಿಂದೆ) ಸರಾಸರಿ ತಾಪಮಾನಕ್ಕಿಂತ 2 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಮಾತ್ರ ಹೆಚ್ಚಳವಾಗುವಂತೆ ನಿಯಂತ್ರಿಸಲು ಜಾಗತಿಕ ಮಟ್ಟದಲ್ಲಿ ಕ್ರಮಕೈಗೊಳ್ಳುವ ವಿಷಯದ ಕುರಿತು ಈ ಸಭೆ ಚರ್ಚಿಸಿತು.

### ಸೌರಶಕ್ತಿ ಗುಂಪಿಗೆ ಭಾರತದ ನೇತೃತ್ವ

ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ನಡೆದ ಹವಾಮಾನ ಬದಲಾವಣೆ ಶೃಂಗಸಭೆಯ ಸಂದರ್ಭದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅಂತರರಾಷ್ಟ್ರೀಯ ಸೌರಶಕ್ತಿ ಒಕ್ಕೂಟಕ್ಕೆ ಚಾಲನೆ ನೀಡಿದರು. ಸೌರಶಕ್ತಿಯ ತಂತ್ರಜ್ಞಾನದಲ್ಲಿ ಹೆಚ್ಚಿನ ಸಂಶೋಧನೆಯನ್ನು ಕೈಗೊಳ್ಳುವ ಸಲುವಾಗಿ ಈ ಗುಂಪಿಗೆ ಭಾರತ ನೇತೃತ್ವ ವಹಿಸಲಿದ್ದು ವಿಶ್ವದ 120 ದೇಶಗಳು ಕೈಜೋಡಿಸಿವೆ. ಅಲ್ಲದೇ ಅನೇಕ ಉದ್ಯಮಪತಿಗಳು ಬಹುರಾಷ್ಟ್ರೀಯ ಕಂಪೆನಿಗಳು ಸಹಾಯಹಸ್ತ ನೀಡಿವೆ. ನವದೆಹಲಿಯಲ್ಲಿ ಈ ಒಕ್ಕೂಟದ ಕೇಂದ್ರ ಸ್ಥಾಪನೆಗೊಳ್ಳಲಿದೆ. 2030ರ ಹೊತ್ತಿಗೆ ವಾತಾವರಣವನ್ನು ಕಲುಷಿತಗೊಳಿಸದೇ ಪುನರುಜ್ಜೀವನಗೊಳಿಸಬಲ್ಲ ಮೂಲಗಳಿಂದ ಹೆಚ್ಚಿನ ವಿದ್ಯುತ್ತನ್ನು ಉತ್ಪಾದನೆ ಮಾಡುವತ್ತ ಈ ಯೋಜನೆ ಪ್ರಯತ್ನ ಮಾಡಲಿದ್ದು, ಇದೊಂದು ವಿದ್ಯುತ್ ಕ್ಷೇತ್ರದ ಸಮೀಕರಣಗಳನ್ನು ಬದಲಿಸಬಲ್ಲ ಯೋಜನೆಯಿದು ಎಂದು ಎಲ್ಲರ ಶ್ಲಾಘನೆಗೆ ಪಾತ್ರವಾಗಿದೆ. ಹಾಗೆಯೇ, 2030 ರ ವೇಳೆಗೆ ಭಾರತದ ಒಟ್ಟೂ ವಿದ್ಯುಚ್ಛಕ್ತಿಯ ಅಗತ್ಯದ ಶೇ. 40ರಷ್ಟು ಭಾಗವನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಪೂರೈಸುವುದಾಗಿ ಭಾರತ ಘೋಷಿಸಿದೆ.



### ಎಚ್ಚರ ವಹಿಸಬೇಕಿದೆ ಭಾರತ

ತಾಪಮಾನ ಏರಿಕೆಗೆ ಕಾರಣವಾದ ಹಸಿರುಮನೆ ಅನಿಲಗಳನ್ನು ಅತಿಹೆಚ್ಚು ಹೊರಸೂಸುವ ದೇಶಗಳ ಸಾಲಿನಲ್ಲಿ ಭಾರತ ಮೂರನೇ ಸ್ಥಾನದದಲ್ಲಿದೆ. ಆದರೆ ತಲಾವಾರು ಅಂಕಿಅಂಶಗಳನ್ನು ತೆಗೆದುಕೊಂಡರೆ ಬಹುತೇಕ ಪಾಶ್ಚಾತ್ಯ ದೇಶಗಳು ಮತ್ತು ತೈಲ ಉತ್ಪಾದಿಸುವ ಅರಬ್ ದೇಶಗಳು ಮೊದಲ ಸ್ಥಾನಗಳಲ್ಲಿದ್ದರೆ ಚೀನಾ ಹಾಗೂ ಭಾರತ ಕ್ರಮವಾಗಿ 54 ಮತ್ತು 133ನೇ ಸ್ಥಾನಗಳಲ್ಲಿವೆ.

2030ರ ಹೊತ್ತಿಗೆ ವಿಶ್ವದ ಜನಸಂಖ್ಯೆ 900 ಕೋಟಿಯಾಗಲಿದ್ದು ಅದರಲ್ಲಿ 600 ಕೋಟಿಯಷ್ಟು ಜನರು ನಗರವಾಸಿಗಳಾಗಲಿದ್ದಾರೆ. ಭಾರತದಲ್ಲಿ ಜನಸಂಖ್ಯೆಯ ಅರ್ಧದಷ್ಟು (ಸುಮಾರು 60 ಕೋಟಿ) ಕೇವಲ 68 ನಗರಗಳಲ್ಲಿ ವಾಸಿಸಲಿದ್ದಾರೆ. ಆತಂಕದ ಸಂಗತಿಯೆಂದರೆ ವಿಶ್ವ ಆರೋಗ್ಯ ಸಂಸ್ಥೆ ನಡೆಸಿದ ಅಧ್ಯಯನದ ಪ್ರಕಾರ ಅತಿಯಾಗಿ ಮಲಿನಗೊಂಡ ವಿಶ್ವದ ಇಪ್ಪತ್ತು ನಗರಗಳಲ್ಲಿ ಹದಿಮೂರು ನಗರಗಳು ಭಾರತದಲ್ಲಿವೆ. ಮಾಲಿನ್ಯಗೊಂಡ ನಗರಗಳ ಯಾದಿಯಲ್ಲಿ ದೇಶದ ರಾಜಧಾನಿ ನವದೆಹಲಿ ಅಗ್ರಸ್ಥಾನ ಪಡೆದರೆ ಪಟ್ನಾ, ಗ್ವಾಲಿಯರ್ ಮತ್ತು ರಾಯಪುರ್‌ಗಳು ನಂತರದ ಸ್ಥಾನಗಳಲ್ಲಿವೆ.

ಬಡತನ ರೇಖೆಯ ಕೆಳಗಿರುವ ಜನಸಂಖ್ಯೆಯ ದೊಡ್ಡ ಭಾಗದ ಆರ್ಥಿಕ ಪ್ರಗತಿಗೆ ಕೈಗಾರಿಕೆಗಳ ಮೂಲಕ ಉದ್ಯೋಗ ಸೃಷ್ಟಿಸುವುದು ಭಾರತದಂತಹ ದೇಶದಲ್ಲಿ ಅನಿವಾರ್ಯ. ಆದರೆ ಆರ್ಥಿಕ ಪ್ರಗತಿಯ ಜೊತೆಗೆ ಪರಿಸರದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವುದು ಅಷ್ಟೇ ಮಹತ್ವದ್ದಾಗಿದೆ. ಏಕೆಂದರೆ ಪರಿಸರ ಕಾಳಜಿಯಿಲ್ಲದ ಯೋಜನೆಗಳು ಭವಿಷ್ಯದಲ್ಲಿ ದೇಶದ ಆರ್ಥಿಕತೆಗೂ ಮಾರಕವಾಗಲಿವೆ. ಆದ್ದರಿಂದ ಪರಿಸರಸ್ನೇಹಿಯಾಗುವ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವುದು, ತಂತ್ರಜ್ಞಾನದ ಸದ್ಬಳಕೆಯಿಂದ ವಾತಾವರಣ ಪ್ರದೂಷಣೆಯನ್ನು ಕಡಿಮೆಗೊಳಿಸುವುದಕ್ಕೆ ಆದ್ಯತೆ ನೀಡಬೇಕು. ಜೊತೆಗೆ ಗ್ರಾಮೀಣ ಜನಜೀವನವನ್ನು ಸದೃಢಗೊಳಿಸಿ ನಗರಗಳಿಗೆ ವಲಸೆ ಹೋಗುವುದನ್ನು ನಿಯಂತ್ರಿಸುವುದಕ್ಕೂ ಗಮನ ಹರಿಸಬೇಕಾಗಿದೆ. ಹಾಗೆಯೇ ಗ್ರಾಮಗಳು ನಗರಗಳಿಗೆ ಸಾಮಾನು ಸರಂಜಾಮುಗಳನ್ನೊದಗಿಸಿ ಪೋಷಿಸುವ ಕೇಂದ್ರಗಳಷ್ಟೇ ಆಗದಿರುವಂತೆ ನೋಡಿಕೊಳ್ಳಬೇಕಿದೆ.

# ತಮಿಳುನಾಡಿನಲ್ಲಿ ಭೀಕರ ಪ್ರವಾಹ । ೩೨೫ ಕ್ಕೂ ಹೆಚ್ಚು ಬಲಿ । ಲಕ್ಷಾಂತರ ಜನ ಸಂಕಷ್ಟದಲ್ಲಿ

ಕಳೆದ ಹಲವಾರು ದಿನಗಳಿಂದ ತಮಿಳುನಾಡಿನಲ್ಲಿ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಚೆನ್ನೈ, ವಿಳ್ಳುಪುರಂ, ಕಾಂಚೀಪುರಂ, ಕಡಲೂರು, ತಿರುವಣ್ಣಾಮಲೈ ಮೊದಲಾದ ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿಯುಂಟಾಗಿದೆ. ಲಕ್ಷಾಂತರ ಜನರು ಮನೆ ಬಿಟ್ಟು ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆದಿದ್ದಾರೆ. ಕುಡಿಯುವ ನೀರಿಗೂ ಹಾಹಾಕಾರವೆದ್ದಿದೆ.

ಇಂತಹ ವಿಪತ್ತಿನ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸ್ವಯಂಸೇವಕರು ಹಗಲು ರಾತ್ರಿಯೆನ್ನದೇ ಯುದ್ಧೋಪಾದಿಯಲ್ಲಿ ಪರಿಹಾರ ಕಾರ್ಯದಲ್ಲಿ ತೊಡಗಿದ್ದಾರೆ. ತಮಿಳುನಾಡಿನ ಸಂಘ ಪ್ರೇರಿತ ಸಂಘಟನೆ ಸೇವಾಭಾರತಿ ಪರಿಹಾರ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಆರೆಸ್ಸೆಸ್ ಮತ್ತು ಸೇವಾಭಾರತಿ ಚೆನ್ನೈ ನಗರದಲ್ಲಿ ಮೊದಲೆರಡು ದಿನ ನಡೆಸಿದ ಪರಿಹಾರ ಕಾರ್ಯಗಳ ಒಂದು ಸಣ್ಣ ಚಿತ್ರಣ ಇಲ್ಲಿದೆ. ಸ್ವಯಂಸೇವಕರ ಈ ಸೇವಾ ಕಾರ್ಯ ಇನ್ನೂ ಮುಂದುವರಿಯುತ್ತಿದೆ.

- ಅಣ್ಣಾನಗರ, ಟ್ರಿಪ್ಲಿಕೇನ್, ತಿರುನೀರ್ ಮಲೈ, ಒಟ್ಟೇರಿ, ನೇಸಪಾಕ್ಕಂ, ಕೊಳತ್ತೂರಿನಲ್ಲಿ 15,000 ಆಹಾರದ ಪೊಟ್ಟಣಗಳ ವಿತರಣೆ
- ರೆಡ್‌ಹಿಲ್‌ನಲ್ಲಿ 250 ನವವಾಸಿಗಳಿಗೆ ಆಹಾರ ಮತ್ತು ವಸತಿ ವ್ಯವಸ್ಥೆ
- ಬಿವಿ ಕಾಲೋನಿಯಲ್ಲಿ ಬಜರಂಗ ದಳದಿಂದ 300 ಕುಟುಂಬಗಳಿಗೆ ಊಟದ ವ್ಯವಸ್ಥೆ
- ಪೆರಂಬೂರು ಸುತ್ತಿಮುತ್ತಲಿನ 15 ವಸತಿ ಪ್ರದೇಶಗಳ ಜನರಿಗೆ ಸತತವಾಗಿ ಊಟದ ವ್ಯವಸ್ಥೆ. ಒಂದೇ ದಿನ ರಾತ್ರಿ ಸುಮಾರು 12,500 ಚಪಾತಿಗಳ್ನು ವಿತರಣೆ.
- ಎಗ್‌ಮೋರ್ ರೈಲ್ವೇ ನಿಲ್ದಾಣದಲ್ಲಿ ಸಿಕ್ಕಿಹಾಕಿಕೊಂಡ ಪರವೂರಿಗೆ ಹೋಗುವ ಪ್ರಯಾಣಿಕರಿಗೆ ಟೀ ವಿತರಣೆ
- ಜೊತೆಗೆ, ಮಿಲಿಟರಿ ಮತ್ತು ಪೊಲೀಸರ ಜೊತೆಗೂಡಿ ರಕ್ಷಣಾ ಕಾರ್ಯದಲ್ಲೂ ತೊಡಗಿದ್ದಾರೆ ಸ್ವಯಂಸೇವಕರು.










## ಸ್ಥಳೀಯ ರೈತರೊಂದಿಗೆ ಸಹಯೋಗ : ಮೇವಿನೊಂದಿಗೆ ಗೊಬ್ಬರದ ವಿನಿಮಯ

**ನವೆಂಬರ್ 15 ರ ಸಂಚಿಕೆಯಲ್ಲಿ ಪ್ರಕಟವಾದ ಗೋಶಾಲೆಯ ಬಗೆಗಿನ ಲೇಖನದ ಬಗ್ಗೆ ಎಲ್ಲೆಡೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಗೋಶಾಲೆಯ ಬಗ್ಗೆ ಇನ್ನೊಂದಿಷ್ಟು ಮಾಹಿತಿ ಇಲ್ಲಿದೆ.**

ದೊಡ್ಡ ಸಂಖ್ಯೆಯಲ್ಲಿ ದನಗಳಿದ್ದಾಗ ಅಗತ್ಯವಿರುವ ಮೇವನ್ನು ಕಾಲಕಾಲಕ್ಕೆ ಒದಗಿಸುವುದು ಗೋಶಾಲೆ ನಡೆಸುವವರ ಮುಂದಿರುವ ಸವಾಲುಗಳಲ್ಲೊಂದು. ಅದರಲ್ಲೂ ಬರಗಾಲ, ಬೆಳೆನಾಶ ಮೊದಲಾದ ಸಮಯಗಳಲ್ಲಿ ಹುಲ್ಲಿನ ದರವೂ ಗಗನಕ್ಕೇರುವುದರಿಂದ ಮೇವನ್ನು ಹೊಂದಿಸುವುದು ಬಹಳ ಕಷ್ಟ. ಈ ಸಮಸ್ಯೆಯ ಪರಿಹಾರಕ್ಕಾಗಿ ಮಧುಗಿರಿಯ ಸುರಭಿ ಗೋಶಾಲೆಯಲ್ಲಿ ಸರಳವಾದ ಉಪಾಯವನ್ನು ಕಂಡುಕೊಂಡಿದ್ದಾರೆ. ಸುತ್ತಲಿನ ಗ್ರಾಮಗಳ ರೈತರೊಂದಿಗೆ ಹುಲ್ಲಿನ ಬದಲಾಗಿ ಗೊಬ್ಬರವನ್ನು ವಿನಿಮಯ ಮಾಡಿಕೊಳ್ಳುವ ಪದ್ಧತಿಯನ್ನು ಇವರು ಬೆಳೆಸಿಕೊಂಡಿದ್ದಾರೆ. ಗೋಶಾಲೆಯಲ್ಲೊಂದು ಟ್ರ್ಯಾಕ್ಟರ್ ಇದೆ. ಟ್ರ್ಯಾಕ್ಟರಿಗೆ ಗೊಬ್ಬರ ತುಂಬಿಸಿ ಕಳುಹಿಸುವುದು ಗೋಶಾಲೆಯ ಜವಾಬ್ದಾರಿಯಾದರೆ, ಡೀಸೆಲ್ ತುಂಬಿಸಿ ಹುಲ್ಲನ್ನು ಟ್ರ್ಯಾಕ್ಟರಿಗೆ ತುಂಬಿಸಿ ಕಳುಹಿಸುವ ಜವಾಬ್ದಾರಿ ರೈತರದು. ಇದರಿಂದ ಗೋಶಾಲೆಯ ದನಗಳಿಗೆ ಅಗತ್ಯ ಮೇವು ಕಾಲಕಾಲಕ್ಕೆ ಪೂರೈಕೆಯಾಗುವುದು ಒಂದಾದರೆ ರೈತರ ಹೊಲಗಳಿಗೆ ಸಮೃದ್ಧ ಸಾವಯವ ಗೊಬ್ಬರವು ದೊರಕಿ ಬಂಗಾರದ ಬೆಳೆ ತೆಗೆಯುವುದು ಇನೊಂದು ಲಾಭ. ಇದರಿಂದಾಗಿ ಸ್ಥಳೀಯ ರೈತರಿಗೆ ಗೋಶಾಲೆಯೊಂದಿಗೆ ಭಾವನಾತ್ಮಕ ಸಂಬಂಧವೂ ಬೆಳೆದಿದೆ.

# ಸಾವಯವ ರೈತರಿಗೆ ಆರ್ಗ್ಯಾನಿಕ್ ಮಂಡ್ಯ

ನೆಲದ ಮಾತು

ಓದಿದ್ದು ಎಂಜಿನಿಯರಿಂಗ್. ಹಲವು ಪ್ರತಿಷ್ಠಿತ ಐಟಿ ಕಂಪೆನಿಗಳಲ್ಲಿ ಕೆಲಸ. ಕೈತುಂಬಾ ಸಂಬಳ. ಆ ಕಂಪೆನಿಗಳನ್ನು ಬಿಟ್ಟು ತಮ್ಮದೇ ಕಂಪೆನಿ ಆರಂಭಿಸಿದರು. ಆದರೂ ಬಿಡದ ಮಣ್ಣಿನ ಸೆಳೆತ. ಸ್ವಂತ ಜಿಲ್ಲೆಯಾದ ಮಂಡ್ಯದಲ್ಲಿ ನಡೆದ ರೈತರ ಸರಣಿ ಆತ್ಮಹತ್ಯೆಯ ಘಟನೆಗಳು ಮಣ್ಣಿನಲ್ಲಿ ಕೆಲಸ ಮಾಡುವ ಅವರ ನಿರ್ಧಾರವನ್ನು ಮತ್ತೆ ಗಟ್ಟಿಗೊಳಿಸಿತು.

ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಲೇಬೇಕು ಎಂದು ನಿರ್ಧರಿಸಿ ಮಂಡ್ಯಕ್ಕೆ ಬಂದ ಸೂನಗನಹಳ್ಳಿಯ ಮಧುಚಂದನ್ ಅವರು, ಮೊದಲು ಮಾಡಿದ ಕೆಲಸ ಎಂದರೆ ಮಂಡ್ಯ ಸಾವಯವ ಕೃಷಿಕರ ಸಹಕಾರ ಸಂಘ ಸ್ಥಾಪಿಸಿದರು. ಇವರ ತಂದೆ ಚಿಕ್ಕದೇವಯ್ಯ ಅವರು ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಕುಲಪತಿಯಾಗಿದ್ದರು. ಅವರ ಕೃಷಿ ನಂಟು ಇವರನ್ನೂ ಇಲ್ಲಿಗೆ ಸೆಳೆಯುವ ಅಂಶಗಳಲ್ಲಿ ಒಂದಾಗಿದೆ. ಬೆಂಗಳೂರಿನಲ್ಲಿ ಈಗಲೂ ಐಟಿ ಕಂಪೆನಿಯೊಂದನ್ನು ನಡೆಸುತ್ತಿದ್ದಾರೆ.

ಸಾವಯವ ಕೃಷಿಯಲ್ಲಿ ತೊಡಗಿಕೊಂಡಿರುವ 270ಕ್ಕೂ ಹೆಚ್ಚು ಮಂದಿ ರೈತರನ್ನು ಸಂಘಕ್ಕೆ ಸೇರಿಸಿಕೊಂಡಿದ್ದಾರೆ. ಅವರ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ಸಮಾನ ಮನಸ್ಕರಿಂದ ಆರ್ಥಿಕ ನೆರವು ಪಡೆದು 'ಆರ್ಗ್ಯಾನಿಕ್ ಮಂಡ್ಯ' ಎಂಬ ಸೂಪರ್ ಮಾರ್ಕೆಟ್ ಮಳಿಗೆಯನ್ನು ಬೆಂಗಳೂರು–ಮೈಸೂರು ಹೆದ್ದಾರಿಯ ಮಂಡ್ಯ ತಾಲ್ಲೂಕಿನ ಬೂದನೂರು ಬಳಿ ಆರಂಭಿಸಿದ್ದಾರೆ. ಜಿಲ್ಲೆಯಲ್ಲಿ ಹಲವಾರು ವರ್ಷಗಳಿಂದ ರೈತರು ಸಾವಯವ ಕೃಷಿ ಮಾಡಿಕೊಂಡು ಬಂದಿದ್ದಾರೆ. ಆದರೆ, ಅವರಿಗೆ ಸೂಕ್ತ ಮಾರುಕಟ್ಟೆಯ ಕೊರತೆ ಇದೆ. ಎಪಿಎಂಸಿ, ಹಾಪ್‌ಕಾಮ್‌ಗಳು ಇವತ್ತಿನ ತಂತ್ರಜ್ಞಾನ ಅಳವಡಿಸಿಕೊಂಡಿಲ್ಲ. ರೈತರು ಹಾಗೂ ಗ್ರಾಹಕರ ನಡುವೆ ಸಂಪರ್ಕ ತಪ್ಪಿದ್ದು, ನಡುವೆ ದಲ್ಲಾಳಿಗಳು ನುಸುಳಿಕೊಂಡಿದ್ದಾರೆ. ಇದನ್ನು ತಪ್ಪಿಸಿ ನೇರ ಸಂಪರ್ಕಗೊಳಿಸುವ ಉದ್ದೇಶದಿಂದ ಆರ್ಗ್ಯಾನಿಕ್ ಮಂಡ್ಯ ಎಂಬ ಸೂಪರ್ ಮಾರ್ಕೆಟ್ ಹುಟ್ಟು ಹಾಕಿದರು.

**ಉತ್ತಮ ಬೆಲೆ: ಮಳಿಗೆ ಆರಂಭಿಸಿದ್ದಲ್ಲದೇ ಅವರ ಎದುರಿಗೇ ಸಾವಯವ ವಸ್ತುಗಳ ಮಾರಾಟ ಆರಂಭಿಸಿರುವುದರಿಂದ ರೈತರಲ್ಲಿ ಆತ್ಮವಿಶ್ವಾಸ ಮೂಡಿದೆ. ಸಾವಯದ ಪದ್ಧತಿಯಲ್ಲಿ ಬೆಳೆದರೆ ಜನ ಖರೀದಿಸುತ್ತಾರೆಂಬುದು ಖಾತರಿಯಾಗಿದೆ. ಈಗ ಸಾವಯವ ರೈತರ ಉತ್ಪನ್ನಕ್ಕೆ ಮಾರುಕಟ್ಟೆಯಲ್ಲಿ ಸಿಗುತ್ತಿರುವ ಬೆಲೆ ನೋಡಿ ಉಳಿದ ರೈತರು ಸಾವಯವ ಪದ್ಧತಿಯಲ್ಲಿ ಬೆಳೆಯಲು ಮುಂದಾಗುತ್ತಿದ್ದಾರೆ. ಗ್ರಾಹಕರಿಗೂ ರೈತರಿಂದ ನೇರವಾಗಿ ಖರೀದಿ ಮಾಡಿ ಕೊಡುತ್ತೇವೆ ಎಂಬ ಭರವಸೆ ಮೂಡಿಸುತ್ತಿದ್ದೇವೆ. ಹಾಗಾಗಿ ಗ್ರಾಹಕರು ಉತ್ತಮ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಒಂದು ತಿಂಗಳಲ್ಲಿ 15 ಲಕ್ಷ ವಹಿವಾಟು ನಡೆಸಿದ್ದೇವೆ ಎಂದು ಸಂಸ್ಥಾಪಕ ಮಧುಚಂದನ್ ವಿವರಿಸಿದರು.**

**ತಂತ್ರಜ್ಞಾನದ ಬಳಕೆ:** 'ಆರ್ಗ್ಯಾನಿಕ್ ಮಂಡ್ಯ ಸೂಪರ್ ಮಾರ್ಕೆಟ್'ನ ವಸ್ತುಗಳನ್ನು ಮಾರಾಟ ಮಾಡಲು ತಂತ್ರಜ್ಞಾನ ಬಳಸಿಕೊಳ್ಳಲಾಗಿದೆ. ಫೇಸ್‌ಬುಕ್ ಖಾತೆ ತೆರೆಯಲಾಗಿದ್ದು, ಆನ್‌ಲೈನ್ ಬುಕ್ಕಿಂಗ್ ಸೌಲಭ್ಯ ಬೆಂಗಳೂರು ಹಾಗೂ ಮಂಡ್ಯದ ಜನರಿಗೆ ಲಭ್ಯವಿದೆ.

ಕುಟುಂಬದ ದಿನಸಿ ಖರ್ಚನ್ನು ಗಮನದಲ್ಲಿಟ್ಟುಕೊಂಡು 20 ಸಾಮಗ್ರಿ ಒಳಗೊಂಡದ್ದು, 29 ಸಾಮಗ್ರಿ ಒಳಗೊಂಡದ್ದು, 36 ಸಾಮಗ್ರಿ ಒಳಗೊಂಡದ್ದನ್ನು – ಹೀಗೆ ಮೂರು ಬಾಸ್ಕೆಟ್ ಮಾಡಿ ಮಾರಾಟ ಮಾಡಲಾಗುತ್ತಿದೆ. ರಾಜಮುಡಿ, ಸೋನಾ ಮಸೂರಿ ಅಕ್ಕಿ, ತೊಗರಿ ಬೇಳೆ, ಗೋಧಿಹಿಟ್ಟು, ಕಡ್ಲೆಬೀಜ, ಹೆಸರುಬೇಳೆ, ಜೋನಿಬೆಲ್ಲ, ಅಚ್ಚುಬೆಲ್ಲ ಸೇರಿದಂತೆ ಹಲವು ಬಗೆಯ ವಸ್ತುಗಳ ಮಾರಾಟ ಮಾಡಲಾಗುತ್ತಿದೆ. ಜತೆಗೆ ಪತಂಜಲಿ ಅವರ ವಸ್ತುಗಳೂ ಇಲ್ಲಿ ಸಿಗುತ್ತವೆ.

**ಮಂಡ್ಯ ಬೆಲ್ಲ:** ರಾಸಾಯನಿಕ ಬಳಕೆಯಿಂದಾಗಿ ದೇಶದ ವಿವಿಧೆಡೆ ರವಾನೆಯಾಗುತ್ತಿದ್ದ ಮಂಡ್ಯದ ಬೆಲ್ಲಕ್ಕೆ ವಹಿವಾಟಿನಲ್ಲಿ ಹೊಡೆತ ಬಿದ್ದಿತ್ತು. ಅದರ ಅಧಿಪತ್ಯವನ್ನು ಮರುಸ್ಥಾಪಿಸಲು 'ಮಂಡ್ಯ ಬೆಲ್ಲ' ಹೆಸರಿನಲ್ಲಿ ಸಾವಯವ ಪದ್ಧತಿ ಹಾಗೂ ರಾಸಾಯನಿಕ ಮುಕ್ತ ತಯಾರಿಕೆ ಪದ್ಧತಿಯಲ್ಲಿ ಬೆಲ್ಲವನ್ನು ಮಾರುಕಟ್ಟೆಗೆ ಪರಿಚಯಿಸಲಾಗಿದೆ.

ವಿಸಿ ಫಾರ್ಮ್‌ನಲ್ಲಿ ಬೆಲ್ಲದ ಪಾರ್ಕ್ ಅನ್ನು ಟೆಂಡರ್‌ನಲ್ಲಿ ಗುತ್ತಿಗೆಗೆ ಪಡೆಯಲಾಗಿದೆ. ಅಲ್ಲಿ ಸಂಪೂರ್ಣ ಸಾವಯವ ಪದ್ಧತಿಯಲ್ಲಿ ಬೆಳೆದ ಬೆಲ್ಲವನ್ನು ತಯಾರು ಮಾಡಲಾಗುತ್ತಿದೆ. ಸ್ಟಾಂಡರ್ಡ್ ಹಾಗೂ ಪ್ರಿಮಿಯರ್ ಎಂದು ಎರಡು ವಿಭಾಗ ಮಾಡಲಾಗಿದೆ.

"ಈ 'ಆರ್ಗ್ಯಾನಿಕ್ ಮಂಡ್ಯ'ದ ಸದಸ್ಯರಾಗುವವರ ಹೆಸರಿನಲ್ಲಿ ಆರ್‌ಟಿಸಿ ಇರಬೇಕು. ಮಂಡ್ಯ ಜಿಲ್ಲೆಯಲ್ಲಿ ವಾಸವಾಗಿರಬೇಕು ಎನ್ನುವ ಷರತ್ತಿನ ಮೇಲೆ ಸದಸ್ಯತ್ವ. ಇವರ ಸಂಖ್ಯೆಯನ್ನು ವರ್ಷದಲ್ಲಿ 2 ರಿಂದ 3 ಸಾವಿರಕ್ಕೆ ಹೆಚ್ಚಿಸುವ ಗುರಿ ಇದೆ. ಗುಣಮಟ್ಟ ಪರಿಶೀಲಿಸಲು ತಂಡವೊಂದನ್ನು ರಚಿಸಲಾಗಿದೆ. ಗುಣಮಟ್ಟದ ಪ್ಯಾಕಿಂಗ್ ಮೂಲಕ ಬ್ರಾಂಡ್ ವಸ್ತುವಾಗಿ ಪರಿವರ್ತಿಸಿದ್ದೇವೆ" ಎನ್ನುತ್ತಾರೆ ಮಧುಚಂದನ್.

**ಕೃಷಿ ಪ್ರವಾಸದ ಯೋಜನೆ:** ಸಾಫ್ಟ್‌ವೇರ್ ಕಂಪೆನಿ ಉದ್ಯೋಗಿಗಳು ರಜೆ ಕಳೆಯಲು ರೆಸಾರ್ಟ್‌ಗಳ ಮೊರೆ ಹೋಗುತ್ತಾರೆ. ಅಂತಹವರನ್ನು ಸಾವಯವ, ನೈಸರ್ಗಿಕ ಕೃಷಿ ಭೂಮಿಗಳ ಕಡೆಗೆ ಕರೆತರುವ 'ಕೃಷಿ ಪ್ರವಾಸ' ಯೋಜನೆಯನ್ನು ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗುವುದು. ಇದರಿಂದ ಸಾವಯವ ಆಹಾರದ ಮಹತ್ವ, ನಿಸರ್ಗ ಸೌಂದರ್ಯ, ರೈತರ ನೋವು–ನಲಿವಿನ ಕುರಿತ ವಿಚಾರಗಳು ಅನುಭವಕ್ಕೆ ಬರಲಿವೆ. ಈಗಾಗಲೇ ಮೂರು ಕಾರ್ಪೊರೇಟ್ ತಂಡಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

**ಸಂಪಾದಕೀಯ ಸಹಕಾರ** ಸತ್ಯನಾರಾಯಣ ಶಾನಭಾಗ್, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀವತ್ಸ ಸಿ. ಎಂ, ಶ್ರೀಪಾದ ಹೆಚ್. ಎಸ್, ಪ್ರತಾಪ ಕೊಡಂಚ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್



ವಿ ಪಿ ರೆಜಿನಾ ಕೇರಳಾದ ಕೋಜಿಕೋಡಿನ ಒಬ್ಬ ಪತ್ರಕರ್ತೆ. ಮೀಡಿಯಾ ಒನ್ ಜೊತೆ ಕಾರ್ಯನಿರ್ವಹಿಸುತ್ತಿರುವ ಇವರು ಇತ್ತೀಚೆಗೆ ತಮ್ಮ ಫೇಸ್‌ಬುಕ್ ಗೋಡೆಯಲ್ಲಿ ಮುಸಲ್ಮಾನರ ಮದರಸಾಗಳಲ್ಲಿ ಲೈಂಗಿಕ ಕಿರುಕುಳ ನಡೆಯುತ್ತಿದೆ, ತಾವೂ ಚಿಕ್ಕವರಾಗಿದ್ದಾಗ ಈ ತೊಂದರೆ ಅನುಭವಿಸಿದ್ದಿದೆ ಎಂಬ ವಿಷಯವಾಗಿ ಬರೆದುಕೊಂಡಿದ್ದರು. ವಿಷಯ ಪ್ರಸ್ತಾಪವಾಗುತ್ತಿದ್ದಂತೆಯೇ ಅವರಿಗೆ ಬೆದರಿಕೆ ಕರೆಗಳು ಬರತೊಡಗಿವೆ. ಅಲ್ಲಿನ ಶಿಕ್ಷಣ ಇಲಾಖೆಗೆ ದೂರು ನೀಡಿದ್ದರೂ, ಅವರಿಂದಲೂ ಯಾವುದೇ ಸಹಾಯವಾಗಿಲ್ಲ. ಬದಲಿಗೆ, ಸತ್ಯವನ್ನು ತುಳಿಯುವವರಿಗೆ ಕುಮ್ಮಕ್ಕು ನೀಡುತ್ತಲೇ ಬಂದಿದ್ದಾರೆ. ರೆಜಿನಾಳಂತಹ ಮುಸಲ್ಮಾನ ಹೆಣ್ಣು ಮಕ್ಕಳು ಯಾವತ್ತೂ ಶೋಷಣೆಗೊಳಗಾದವರು. ಆದ್ದರಿಂದಲೇ ಫೇಸ್‌ಬುಕ್ ಮೊರೆ ಹೋಗಿ ಅಳಲನ್ನು ತೋಡಿಕೊಳ್ಳಬೇಕಾಯಿತು.

**ಕಳೆದ ಜುಲೈ – ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ ಶೇ.7.4 ಕ್ಕೆ ಏರಿಕೆಯಾಗಿದೆ. ಇದಕ್ಕೂ ಹಿಂದಿನ ತ್ರೈಮಾಸಿಕದಲ್ಲಿ ಇದು ಶೇ.7 ರಷ್ಟು ಮಾತ್ರವೇ ಇತ್ತು. ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಆರ್‌ಬಿಐ ಘೋಷಿಸಿದ ಹಲವು ಕ್ರಮಗಳು, ಉತ್ಪಾದನಾ ವಲಯ, ಗಣಿ ಮತ್ತು ಸೇವಾವಲಯದಲ್ಲಿನ ಉತ್ತಮ ಸಾಧನೆ, ಜಿಡಿಪಿ ಬೆಳವಣಿಗೆ ದರ ಏರಿಕೆಗೆ ಕಾರಣವಾಗಿದೆ ಎಂದು ವಿಶ್ಲೇಷಿಸಲಾಗಿದೆ. ಈ ಮೂಲಕ ನೆರೆಯ ಚೀನಾವನ್ನು ಹಿಂದಿಕ್ಕುವ ಮೂಲಕ ಭಾರತ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಜಾಗತಿಕ ಅರ್ಥಶಕ್ತಿಯಾಗಿ ಹೊರಹೊಮ್ಮಿದೆ.**

ಅರವತ್ತಮೂರು ವಯಸ್ಸಿನ ಹರೆಯದ ಪ್ರಾಕೃತಿಕ ಆಹಾರ ಮತ್ತು ಆರೋಗ್ಯದ ಪ್ರತಿಪಾದಕ ಮೈಸೂರಿನ ಬಾಲಕೃಷ್ಣಮೂರ್ತಿ 2 ಗಂಟೆ 36 ನಿಮಿಷದ ಅವಧಿಯಲ್ಲಿ ಬರೋಬ್ಬರಿ 1083 ಸೂರ್ಯ ನಮಸ್ಕಾರ ಹಾಕುವ ಮೂಲಕ ವಿಶೇಷ ಸಾಧನೆ ಮಾಡಿದ್ದಾರೆ. ಕಲಬುರ್ಗಿಯ ಸಂಗಮೇಶ್ವರ ಸಭಾಗೃಹದಲ್ಲಿ ರಾಜೀವ್ ದೀಕ್ಷಿತ್ ವಿಚಾರ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಪೂರ್ಣ ದೇಹಕ್ಕೆ ವ್ಯಾಯಾಮ ಒದಗಿಸುವ ಏಳು ಆಸನಗಳ ಕ್ರಮಬದ್ಧ ಸಂಯೋಜನೆಯಾದ ಸೂರ್ಯ ನಮಸ್ಕಾರದ ಮಹತ್ವವನ್ನು ಸಾರುವ ಮೂರ್ತಿಯವರ ಪ್ರಯತ್ನ ಸರ್ವರ ಶ್ಲಾಘನೆಗೆ ಪಾತ್ರವಾಗಿದೆ. ಭಾನುವಾರ ಬೆಳಗ್ಗೆ 4.40ಕ್ಕೆ ಸೂರ್ಯ ನಮಸ್ಕಾರ ಪ್ರಯೋಗ ಆರಂಭಿಸಿದ ಇವರು, 5.40ರ ವೇಳೆಗೆ 441 ಸೂರ್ಯ ನಮಸ್ಕಾರ ಮಾಡುವ ಮೂಲಕ ತಮ್ಮ ಈ ಹಿಂದಿನ ದಾಖಲೆಯನ್ನೇ ತಾವೇ ಮುರಿದರು. ಈ ಮೊದಲು ಒಂದು ತಾಸಿನಲ್ಲಿ 361 ಸೂರ್ಯ ನಮಸ್ಕಾರ ಮಾಡುವ ಮೂಲಕ ದಾಖಲೆ ನಿರ್ಮಿಸಿದ್ದರು.

**1984ರ ಭೋಪಾಲ್ ಅನಿಲ ದುರಂತಕ್ಕೆ ಒಳಗಾಗಿದ್ದ ಪೋಷಕರಿಗೆ ಜನಿಸಿರುವ 10,000 ಮಕ್ಕಳಲ್ಲಿ 2,500 ಮಕ್ಕಳು ಇನ್ನೂ ಅದರ ಅಡ್ಡ ಪರಿಣಾಮಗಳನ್ನು ಎದುರಿಸುತ್ತಿದ್ದಾರೆ ಎಂದು ಭೋಪಾಲ್ ಅನಿಲ ದುರಂತದ 31 ನೇ ವಾರ್ಷಿಕ ದಿನ ಕೆಲವು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಭೋಪಾಲ್ ಅನಿಲ ದುರಂತದಲ್ಲಿ ಉಳಿದವರ ಸಹಾಯ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಯೊಂದರ ತಜ್ಞರು ತಿಳಿಸುವಂತೆ ಯೂನಿಯನ್ ಕಾರ್ಬೈಡ್ ಕಾರ್ಖಾನೆಯ ವಿಷಾನಿಲಗಳಿಗೆ ಒಡ್ಡಿಕೊಂಡಿದ್ದ ಪೋಷಕರಿಗೆ ಜನಿಸುವ ಮಕ್ಕಳು ಇನ್ನೂ ಅದರ ಅಡ್ಡ ಪರಿಣಾಮಗಳಿಗೆ ಬಲಿಯಾಗಿ ವಿಕಲಾಂಗತೆಯ ದುಷ್ಪರಿಣಾಮಗಳನ್ನು ಎದುರಿಸುತ್ತಿದ್ದಾರೆ. ಮೂವತ್ತೊಂದು ವರ್ಷಗಳ ಹಿಂದೆ 1984 ಡಿಸೆಂಬರ್ 2 ಮತ್ತು 3 ರಂದು ಸಂಭವಿಸಿದ ಈ ದುರ್ಘಟನೆಯಲ್ಲಿ 3,000 ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು.**

ಭಾರತ ಸೇನೆಗೆ ಅವಶ್ಯಕವಿರುವ 70% ಹಾರ್ಡ್‌ವೇರ್ ಉಪಕರಣಗಳಿಗಾಗಿ ಆಮದನ್ನು ಅವಲಂಬಿಸಿರುವ ಕೇಂದ್ರ ಸರ್ಕಾರ 'ಮೇಕ್ ಇನ್ ಇಂಡಿಯಾ' ಮೂಲಕ ಆಮದನ್ನು ಕಡಿಮೆಗೊಳಿಸಲು ಪ್ರಯತ್ನಿಸುತ್ತಿರುವುದು ತಿಳಿದಿರುವ ವಿಚಾರ. ಈ ನಿಟ್ಟಿನಲ್ಲಿ ಗಮನಾರ್ಹ ವಿಷಯವೆಂದರೆ ಕಳೆದ ಒಂದು ವರ್ಷದಲ್ಲಿ ಅಮೇರಿಕಾ, ಬ್ರಿಟನ್, ಇಸ್ರೇಲ್ ಹಾಗೂ ರಷ್ಯಾ ಸೇರಿದಂತೆ 22 ರಾಷ್ಟ್ರಗಳಿಗೆ ಭಾರತ ರಕ್ಷಣಾ ಉಪಕರಣಗಳನ್ನು ರಫ್ತು ಮಾಡಿರುವುದು. ಅಮೇರಿಕಾಕ್ಕೆ ಫೋರ್ಜಿಂಗ್ ಉಪಕರಣಗಳು, ಇಲೆಕ್ಟ್ರಾನಿಕ್ ಉಕರಣಗಳು, ಹಾರಾಟ ನಿಯಂತ್ರಣ ಪ್ಯಾನೆಲ್ ಇತ್ಯಾದಿಗಳನ್ನು ರಫ್ತು ಮಾಡಿದ್ದರೆ, ಬ್ರಿಟನ್ ದೇಶಕ್ಕೆ ಟ್ರಾನ್ಸ್‌ಮಿಟಿಂಗ್ ಟ್ಯೂಬ್‌ಗಳು ಹಾಗೂ ರಷ್ಯಾಗೆ ಮಿಗ್ ಹಾಗೂ ಸುಕೋಯ್ ವಿಮಾನಕ್ಕೆ ಸಂಬಂಧಿಸಿದ ಬಿಡಿಭಾಗಗಳನ್ನು ಮತ್ತು ಸೇವೆಯನ್ನು ಒದಗಿಸಿದೆ.

## ಸಾಲುದ್ದದ ಸುದ್ದಿಗಳು

ಅಫ್ಘಾನಿಸ್ತಾನಕ್ಕೆ ಚೇತಲ್ ಹೆಲಿಕಾಪ್ಟರ್‌ಗಳನ್ನು, ನೇಪಾಳಕ್ಕೆ ಧ್ರುವ್ ಹೆಲಿಕಾಪ್ಟರ್‌ಗಳನ್ನು ಹಾಗೂ ಬುಲಟ್ಪ್ರೂಫ್ ಜಾಕೆಟ್‌ಗಳನ್ನು, ಮಲೇಷ್ಯಾಕ್ಕೆ ಮಿಗ್ ಹಾಗೂ ಸುಕೋಯ್ ಬಿಡಿಭಾಗಗಳನ್ನು, ಮಾರಿಷಿಯಸ್‌ಗೆ ಪೆಟ್ರೋಲ್ ಹಡಗುಗಳನ್ನು, ಓಮನ್‌ಗೆ ಜಾಗ್ವಾರ್ ವಿಮಾನಕ್ಕೆ ಸಂಬಂಧಿಸಿದ ಬಿಡಿಭಾಗಗಳನ್ನು ಮತ್ತು ಸೇವೆಯನ್ನು ಒದಗಿಸಿದ್ದು ಭಾರತದ ರಫ್ತಿನ ಪ್ರಮುಖ ಭಾಗವಾಗಿತ್ತು. ಸಾರ್ವಜನಿಕ ವಲಯದ ರಕ್ಷಣಾ ಉದ್ದಿಮೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಒಪ್ಪಿಗೆ ನೀಡುವ ಪ್ರಕ್ರಿಯೆಗಳನ್ನು ಸರಳ ಹಾಗೂ ಸುವ್ಯವಸ್ಥಿತಗೊಳಿಸಿದ್ದರಿಂದ ಇದು ಸಾಧ್ಯವಾಯಿತು ಎನ್ನುತ್ತಾರೆ ರಕ್ಷಣಾ ಸಚಿವಾಲಯದ ಅಧಿಕಾರಿಗಳು.



**ಮಹಾರಾಷ್ಟ್ರದ ಡಾ॥ ಗಣೇಶ್ ರಾಖ ಕಡು ಬಡವ ಕುಟುಂಬದಲ್ಲಿ ಜನಿಸಿದವರು. ಹೇಗೋ ಕಷ್ಟಪಟ್ಟು ವೈದ್ಯಕೀಯ ಶಾಸ್ತ್ರದ ಅಧ್ಯಯನ ಮಾಡಿದರು. ಇಂದಿಗೂ ತಮ್ಮ ಆಸ್ಪತ್ರೆಯಲ್ಲಿ ಹೆಣ್ಣು ಮಗು ಜನಿಸಿದರೆ, ಹೆರಿಗೆಗೆ ಹಣ ಪಡೆಯುವುದಿಲ್ಲ ಈ ವೈದ್ಯರು. 'ಹೆಣ್ಣು ಹುಟ್ಟಿದರೆ ಉಚಿತ ಹೆರಿಗೆ' ಎಂಬ ತಮ್ಮ ಯೋಜನೆಯನ್ವಯ ನೂರಾರು ಹೆರಿಗೆಗಳನ್ನು ಮಾಡಿರುವ ಇವರು ಹೆಣ್ಣು ಶಿಶು ಹತ್ಯೆ ಹಾಗೂ ಲಿಂಗ ತಾರತಮ್ಯದ ವಿರುದ್ಧ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಈ ರೀತಿ ಮಾಡುತ್ತಿದ್ದಾರೆ.**

ಮಧ್ಯಪ್ರದೇಶದ ಭೋಪಾಲ್ ಹಾಗೂ ಬಿನಾ ರೈಲ್ವೇ ನಿಲ್ದಾಣಗಳ ನಡುವೆ ಮೊದಲ 'ಮೇಕ್ ಇನ್ ಇಂಡಿಯಾ' ಯೋಜನೆಯ ಐಷಾರಾಮೀ ರೈಲು ಡಬ್ಬಿಗಳ ಪ್ರಾಯೋಗಿಕ ಚಾಲನೆ ನಡೆದಿದೆ. ನಿಶಾಪುತ್ರದಲ್ಲಿರುವ ಕೋಚ್ ನಿರ್ಮಾಣ ಕಾರ್ಖಾನೆಯಲ್ಲಿ ತಯಾರಾದ ಈ ರೈಲು ಬೋಗಿಗಳು ಸುಸಜ್ಜಿತವಾಗಿದ್ದು, ಮನೆಯ ವಾತಾವರಣವನ್ನು ಹೋಲುವ ರೀತಿಯಲ್ಲಿಯೇ ವಿನ್ಯಾಸಗೊಂಡಿವೆ. ಉತ್ತಮ ದರ್ಜೆಯ ಹಾಸಿಗೆ, ನೆಲಕ್ಕೆ ಕಾಲುಹಾಸು, ಮೊಬೈಲ್ ಹಾಗೂ ಲ್ಯಾಪ್‌ಟ್ಯಾಪ್ ಚಾರ್ಜಿಂಗ್ ಸೌಕರ್ಯ, ಎಲ್‌ಇಡಿ ಬಲ್ಬ್, ಜೈವಿಕ ಶೌಚಾಲಯ ಮುಂತಾದ ಸವಲತ್ತುಗಳುಳ್ಳ ಈ ಬೋಗಿಗಳನ್ನು ಶತಾಬ್ದಿ, ರಾಜಧಾನಿ ಎಕ್ಸ್‌ಪ್ರೆಸ್ ರೈಲುಗಳಲ್ಲಿ ಬರಲಿವೆ.

**ಕೋಲಾರದಲ್ಲಿ ಸರ್ಕಾರಿ ವಾಹನ ಚಾಲಕರಾಗಿರುವ ನಾಗರಾಜ ಅವರು ಕಾರ್ಗಿಲ್ ಪರಿಹಾರ ನಿಧಿಗಾಗಿ ಒಂದು ದಿನದ ಸಂಬಳವನ್ನು ದಾನವಾಗಿ ನೀಡಿದ್ದರು. ವಿಶೇಷವೇನೆಂದರೆ, ಅಂದಿನಿಂದ ಇಂದಿನವರೆಗೂ ಅವರು ತಮ್ಮ ಸಹಾಯವನ್ನು ಮುಂದುವರಿಸುತ್ತಲೇ ಬಂದಿದ್ದಾರೆ. 1999ರಲ್ಲಿ ತಿಂಗಳಿಗೆ ರೂ. 130 ರಿಂದ ಆರಂಭಿಸಿದ ಇವರು ಈಗ ರೂ. 850 ಹಣವನ್ನು ಲಿಖಿತ ಸೂಚನೆಯ ಮೂಲಕ ತಮ್ಮ ಸಂಬಳದಿಂದ ಸೈನ್ಯಕ್ಕಾಗಿ ನೀಡುತ್ತಿದ್ದಾರೆ. ಗಡಿಯಲ್ಲಿನ ಸೈನಿಕರು ದೇಶದ ನಿಜವಾದ ಹೀರೋಗಳು, ಅವರೆಡೆ ನಮ್ಮ ಸಹಾಯಹಸ್ತ ಯಾವಾಗಲೂ ಇರಬೇಕು ಎನ್ನುವುದು ಇವರ ಬಲವಾದ ನಂಬಿಕೆ.**

ಇದು ಟ್ವಿಟರ್ ಯುಗ. ಮುಂಚೆ ಮಂತ್ರಿಗಳಿಗೆ ಪತ್ರ ಬರೆದು ಉತ್ತರ ಪಡೆಯುತ್ತಿದ್ದ ಕಾಲ ಕ್ರಮೇಣ ದೂರವಾಗುತ್ತಿದೆ. ಕೇಂದ್ರ ಮಂತ್ರಿಗಳು ತಮ್ಮ ಟ್ವಿಟರ್ ಖಾತೆಗಳನ್ನು ನಿಭಾಯಿಸುತ್ತಿದ್ದಾರೆ. ತಮಗೆ ಬರುವ ಅಹವಾಲುಗಳನ್ನು ಸ್ವೀಕರಿಸಿ ಜನರಿಗೆ ಸಹಾಯ ಮಾಡುತ್ತಾರೆ. ಇಲ್ಲವಾದರೆ ಇತರೆ ಖಾತೆಗಳಿಗೆ ವರ್ಗಾವಣೆ ಮಾಡುತ್ತಾರೆ. ಸುಷ್ಮಾ ಸ್ವರಾಜ್, ವಿಕೆ ಸಿಂಗ್‌ರಿಗೆ ಟ್ವೀಟ್ ಕಳುಹಿಸಿದ ಯೆಮೆನ್ ದೇಶದಲ್ಲಿನ ಎಷ್ಟೋ ಭಾರತೀಯರು ಸುರಕ್ಷಿತವಾಗಿ ಮನೆ ತಲುಪಿದ್ದನ್ನು ಇಲ್ಲಿ ಸ್ಮರಿಸಬಹುದು. ಕೇಂದ್ರ ರೈಲ್ವೇ ಮಂತ್ರಿ ಸುರೇಶ್ ಪ್ರಭು ಅವರ ಕಾರ್ಯ ಕ್ಷಮತೆ ಕುರಿತು ಎರಡು ಘಟನೆಗಳು.



ನಮ್ರತಾ ಎಂಬ ಮಹಿಳೆ ರೈಲಿನಲ್ಲಿ ತನಗೆ ತೊಂದರೆ ಕೊಡುತ್ತಿದ್ದ ಒಬ್ಬ ವ್ಯಕ್ತಿಯ ಬಗ್ಗೆ ಸಚಿವ ಸುರೇಶ್ ಪ್ರಭು ಅವರಿಗೆ ಟ್ವೀಟ್ ಮಾಡಿ ಸಹಾಯ ಕೇಳಿದರು. ಕೂಡಲೇ ಅವರು 182 (ರೈಲು ರಾಷ್ಟ್ರೀಯ ಭದ್ರತಾ ಸಹಾಯವಾಣಿ) ಸಿಬ್ಬಂದಿಯನ್ನು ಸಂಪರ್ಕಿಸಿದರು. ನಮ್ರತಾರನ್ನು ತೊಂದರೆಯಿಂದ ಕಾಪಾಡಲಾಯಿತು.

ಪಾರ್ಶ್ವವಾಯುವಿನಿಂದ ಬಳಲುತ್ತಿದ್ದ ಪಂಕಜ್ ಜೈನ್ ಅವರ ತಂದೆಯನ್ನು ಚಿಕಿತ್ಸೆಗೋಸ್ಕರ ರೈಲಿನಲ್ಲಿ ಕರೆದುಕೊಂಡು ಹೋಗಬೇಕಿತ್ತು. ತಾವು ಇಳಿಯಬೇಕಿದ್ದ ರೈಲು ನಿಲ್ದಾಣದಲ್ಲಿ ಕೇವಲ ಮೂರು ನಿಮಿಷ ನಿಲ್ಲುವುದರಿಂದ ತಂದೆಯನ್ನು ಕೆಳಗೆ ಇಳಿಸಲು ಕಷ್ಟವಾಗುತ್ತದೆಂದು ಸಚಿವ ಸುರೇಶ್ ಪ್ರಭುರವರಿಗೆ ಟ್ವೀಟ್ ಮಾಡಿದ ಪಂಕಜ್‌ಗೆ ತಕ್ಷಣಕ್ಕೆ ಪ್ರತಿಕ್ರಿಯಿಸಿದ ಸಚಿವರು ರೈಲಿನ ವಿವರಗಳನ್ನು ತಿಳಿದುಕೊಂಡು ತಮ್ಮ ಆಡಳಿತವರ್ಗಕ್ಕೆ ತಿಳಿಸಿದರು. ಪಂಕಜ್ ಜೈನ್ ಹಾಗೂ ಅವರ ತಂದೆ ರೈಲಿನಲ್ಲಿ ಹೊರಟು ತಮ್ಮ ನಿಲ್ದಾಣದಲ್ಲಿ ಇಳಿಯುವ ಹೊತ್ತಿಗೆ, ಆ ರಾತ್ರಿಯ ಚಳಿಯಲ್ಲಿ ಅಧಿಕಾರಿಗಳು ಗಾಲಿಕುರ್ಚಿಯನ್ನು ಸಿದ್ಧಪಡಿಸಿಕೊಂಡು ಅವರನ್ನು ಸುರಕ್ಷಿತವಾಗಿ ರೈಲಿನಿಂದ ಇಳಿಸಿಕೊಂಡರು.

## ಗಾಳಿಯಿಂದ ನೀರು : ಇಸ್ರೇಲ್ ತಂತ್ರಜ್ಞಾನ ಭಾರತದಲ್ಲಿ


ಗಾಳಿಯಲ್ಲಿನ ತೇವಾಂಶವನ್ನು ಬಳಸಿ ನೀರನ್ನು ತಯಾರಿಸುವುದು ಹೊಸ ವಿಷಯವೇನಲ್ಲ. ನೀರು ಸಿಗದ ಇಸ್ರೇಲಿನಲ್ಲಿ ವ್ಯವಸಾಯ ಮಾಡುವುದೇ ಹೀಗೆ. ಈ ತಂತ್ರಜ್ಞಾನ ಈಗ ಭಾರತಕ್ಕೂ ಬಂದಿದೆ. ಕೇವಲ ನೀರನ್ನು ತಯಾರಿಸುವುದೇ ಅಲ್ಲದೇ, ಯಂತ್ರಗಳ ನಿರ್ಮಾಣವೂ ನಡೆಯುತ್ತಿದೆ ಹಾಗೂ ಇತರೆ ದೇಶಗಳಿಗೆ ಯಂತ್ರಗಳು ರವಾನೆಯಾಗುತ್ತಿವೆ. ವಾತಾವರಣದಲ್ಲಿನ ತೇವಾಂಶವನ್ನು ಸಾಂದ್ರೀಕರಣಗೊಳಿಸಿ, ಶೈತ್ಯೀಕರಿಸಿ, ಘನೀಕರಿಸಿ ನಂತರ ಹಲವು ಶೋಧಕಗಳ ಮೂಲಕ ಶುದ್ಧೀಕರಿಸಿದ ನೀರನ್ನು ಕುಡಿಯಲು ಉಪಯೋಗಿಸಬಹುದು. ಗುಜರಾತ್, ಆಂಧ್ರಪ್ರದೇಶದ ಕೆಲ ಹಳ್ಳಿಗಳಲ್ಲಿ ಈ ತಂತ್ರಜ್ಞಾನದಿಂದ ನೀರನ್ನು ತಯಾರಿಸಿ ಗ್ರಾಮಸ್ಥರ ನೀರಿನ ದಾಹವನ್ನು ನೀಗಿಸಲಾಗುತ್ತಿದೆ.



## ಗ್ರಾಮೀಣ ವಿದ್ಯುದೀಕರಣ ಯೋಜನೆ ಮಾಹಿತಿಗೆ ಮೊಬೈಲ್ ಆ್ಯಪ್

ಇನ್ನೂ ವಿದ್ಯುತ್ ತಲುಪದ ಗ್ರಾಮಗಳ ವಿದ್ಯುದೀಕರಣ ಕಾರ್ಯದ ಪ್ರಗತಿಯ ತಾಜಾ ಮಾಹಿತಿ ನೀಡುವ ಮೊಬೈಲ್ ಆಧಾರಿತ ಆ್ಯಪ್ ಒಂದನ್ನು ಕೇಂದ್ರ ವಿದ್ಯುತ್ ಮಂತ್ರಾಲಯ ಬಿಡುಗಡೆಗೊಳಿಸಿದೆ. ಗ್ರಾಮೀಣ ವಿದ್ಯುದೀಕರಣ ಕಂಪನಿ ವಿನ್ಯಾಸಗೊಳಿಸಿರುವ ಈ ಆ್ಯಪ್ ಮುಖಾಂತರ ನಮ್ಮ ಮೊಬೈಲಿನಲ್ಲೇ ಇದುವರೆಗೆ ನಡೆದ ಕೆಲಸ, ಪ್ರಗತಿಯಲ್ಲಿರುವ ಕಾರ್ಯ, ಕಾರ್ಯನಿರತ ಇಂಜಿನಿಯರುಗಳ ಮಾಹಿತಿ ಮೊದಲಾದ ಹಲವು ವಿಷಯಗಳನ್ನು ತಿಳಿದುಕೊಳ್ಳಬಹುದಾಗಿದೆ. ವಿಶ್ವಸಂಸ್ಥೆಯ ವರದಿಯ ಪ್ರಕಾರ ದೇಶದ 78.7 ಶೇಕಡ ಜನರಿಗೆ ಮಾತ್ರ ವಿದ್ಯುತ್ ಸೌಲಭ್ಯವಿದೆ. ಅದರಲ್ಲೂ ಒಡಿಶಾ, ಬಿಹಾರ ಮತ್ತು ಅಸ್ಸಾಂ ರಾಜ್ಯಗಳ ಹೆಚ್ಚಿನ ಗ್ರಾಮಗಳು ಇಂದಿಗೂ ವಿದ್ಯುತ್ ಸಂಪರ್ಕದಿಂದ ವಂಚಿತವಾಗಿವೆ.

ಕೇಂದ್ರ ಸರ್ಕಾರವು ದೀನ್ ದಯಾಳ್ ಗ್ರಾಮೀಣ ಜ್ಯೋತಿ ಯೋಜನೆಯ ಮುಖಾಂತರ 2017ರ ಮಾರ್ಚ್ 31 ರೊಳಗೆ ವಿದ್ಯುತ್ ಸಂಪರ್ಕವಿರದ ಎಲ್ಲ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಗುರಿ ಹೊಂದಿದೆ. ಅದಕ್ಕನುಗುಣವಾಗಿ ದಿನಗಣನೆಯನ್ನು ಈ ಆ್ಯಪ್‌ನಲ್ಲಿ ತೋರಿಸಲಾಗುತ್ತಿದೆ. ಬಹುಶಃ ಸರ್ಕಾರದ ಯೋಜನೆಯೊಂದರ ಮಾಹಿತಿ ಹೀಗೆ ಸಾರ್ವಜನಿಕರ ಬೆರಳ ತುದಿಯಲ್ಲಿ ಸಿಗುವಂತಾಗುತ್ತಿರುವುದು ಇದೇ ಮೊದಲ ಬಾರಿಯಿರಬೇಕು!



पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-12-2015



# ಗ್ರಾಮಕ್ಕೊಂದು ಗೋಶಾಲೆ
## ಹೀಗೊಂದು ಪ್ರಯೋಗದ ಸಾಧ್ಯತೆ



ಕೃಷಿಯೇ ಪ್ರಧಾನ ಉದ್ಯೋಗವಾಗಿದ್ದ ನಮ್ಮ ದೇಶದಲ್ಲಿ ಅದರ ಅಗತ್ಯಕ್ಕೆ ತಕ್ಕಂತೇ ಗೊಬ್ಬರ, ಉಳುಮೆ ಹಾಗೂ ಹಾಲು ಮೊದಲಾದವುಗಳಿಗಾಗಿ ಗ್ರಾಮೀಣ ಪ್ರದೇಶದ ಬಹುತೇಕ ಮನೆಗಳಲ್ಲಿ ದನಕರುಗಳನ್ನು ಸಾಕುವ ಪದ್ಧತಿ ಬೆಳೆದುಬಂದಿದೆ. ಇಂದು ಆರ್ಥಿಕ ಪ್ರಗತಿಯ ಹಾದಿಯಲ್ಲಿ ಬದಲಾದ ಕಾಲಕ್ಕನುಗುಣವಾಗಿ ಜೀವನ ನಿರ್ವಹಣೆಗಾಗಿ ಹೆಚ್ಚಿನ ಜನರು ಕೃಷಿಯೇತರ ಉದ್ಯೋಗವನ್ನು ಅವಲಂಬಿಸಬೇಕಾದುದು ಅನಿವಾರ್ಯವಾಗಿದೆ. ಅದರಿಂದಾಗಿ ಬೇರೆ ಊರುಗಳಿಗೆ ವಲಸೆ ಹೋಗುವುದು, ಚಿಕ್ಕ ಕುಟುಂಬ, ಸಮಯದ ಅಭಾವ ಮುಂತಾದ ಕಾರಣಗಳಿಂದ ಮುಂಚಿನಂತೆ ಮನೆಮನೆಗಳಲ್ಲೂ ದನಕರುಗಳನ್ನು ಸಾಕುವುದು ಇಂದಿನ ಪರಿಸ್ಥಿತಿಯಲ್ಲಿ ಕಷ್ಟಕರವಾಗುತ್ತಿದೆ. ಅಂತೆಯೇ ಹತ್ತಿಪ್ಪತ್ತು ದನಕರುಗಳಿಂದ ತುಂಬಿರುತ್ತಿದ್ದ ಕೊಟ್ಟಿಗೆಗಳಲ್ಲಿ ಕೇವಲ ಒಂದೆರಡು ದನಗಳು ಅಥವಾ ಜೆರ್ಸಿ ಆಕಳುಗಳು ಇರುವುದನ್ನು ನಾವು ಇಂದು ಕಾಣಬಹುದು. ಇದರಿಂದಾಗಿ ದೇಸೀ ಪಶುಸಂಪತ್ತು ಅಳಿವಿನಂಚಿಗೆ ಸಾಗುತ್ತಿದೆ ಎನ್ನುವ ಕಳವಳ ಒಂದು ಕಡೆಯಾದರೆ ದೇಸೀ ಆಕಳ ಹಾಲು, ಗೋಮೂತ್ರ, ಗೋಮಯಗಳ ಔಷಧೀಯ ಗುಣಗಳಿಂದ ಸಿಗುವ ಲಾಭ, ಗೊಬ್ಬರ, ಗೋಬರ್ ಗ್ಯಾಸ್ ಮುಂತಾದವುಗಳಿಂದ ಸಿಗುವ ಆರ್ಥಿಕ ಲಾಭದಿಂದ ನಾವು ವಂಚಿತರಾಗುತ್ತಿದ್ದೇವೆ.

**ಇಂತಹ ಪ್ರಯೋಗಗಳು ಈಗಾಗಲೇ ಕೆಲವು ಗ್ರಾಮಗಳಲ್ಲಿ ಪ್ರಾರಂಭಿಕ ಹಂತದಲ್ಲಿದ್ದು, ನಿಮ್ಮ ಊರಿನಲ್ಲೂ ಇಂತಹ ಒಂದು ಗೋಶಾಲೆ ಪ್ರಾರಂಭಿಸುವ ಸಾಧ್ಯತೆಯಿದೆಯೇ? ಯೋಚಿಸಿ. ಯುವಕ ಸಂಘಗಳ ಮೂಲಕ ಅಥವಾ ಸಮಾನ ಮನಸ್ಕರು ಕೆಲವರು ಸೇರಿಕೊಂಡು ಇಂತಹ ಗೋಶಾಲೆ ನಡೆಸಲು ಸುಲಭ. ಈ ಯೋಜನೆಯ ಬಗ್ಗೆ ಹೆಚ್ಚಿನ ಸಮಾಲೋಚನೆಗೆ ಕೃಷಿ ಪ್ರಯೋಗ ಪರಿವಾರದ ಆ. ಶ್ರೀ. ಆನಂದ ಅವರನ್ನು ಸಂಪರ್ಕಿಸಬಹುದು. ದೂ: 94482 04831.**

ಆದ್ದರಿಂದ ದನಕರುಗಳನ್ನು ಸಾಕುವ ಸಲುವಾಗಿ ಸಮಾನ ಮನಸ್ಕರು ಕೈಜೋಡಿಸಿ, ಗ್ರಾಮಕ್ಕೊಂದು ಗೋಶಾಲೆಯನ್ನು ನಡೆಸಬಹುದು. ಹಲವು ಜನರ ಸಹಭಾಗಿತ್ವದಲ್ಲಿ ಇಂತಹ ಗೋಶಾಲೆಗಳನ್ನು ನಡೆಸಬಹುದು. ಇಂತಹ ಗೋಶಾಲೆಯೊಂದಿಗೆ ಸಹಭಾಗಿಯಾದವರಿಗೆ ಹಲವು ಲಾಭಗಳಿವೆ.

- ಗೋಶಾಲೆಯಲ್ಲಿ ಕೆಲಸ ಮಾಡಲು ಕೂಲಿ ನೇಮಿಸಿಕೊಂಡರೂ ಆರ್ಥಿಕವಾಗಿ ನಷ್ಟವಿಲ್ಲ. ತಮ್ಮ ತಮ್ಮೊಳಗೇ ಸಮಯ ನಿಗದಿ ಮಾಡಿಕೊಂಡು ಸ್ವತಃ ತಾವೇ ಗೋಶಾಲೆಯಲ್ಲಿ ಕೆಲಸ ಮಾಡುವುದರಿಂದ ಹಣವೂ ಉಳಿತಾಯ. ಶರೀರಕ್ಕೂ ವ್ಯಾಯಾಮ!
- ಪೇಟೆಯ ಗೋಶಾಲೆಗಳಂತೆ ಹುಲ್ಲಿಗೆ ಹಣ ಕೊಡಬೇಕಾದ ಅಗತ್ಯವಿಲ್ಲ. ತಮ್ಮ ತಮ್ಮ ಜಮೀನಿನಲ್ಲೇ ಬೆಳೆದ ಹುಲ್ಲು ಸಾಕು.
- ನಮ್ಮ ಮನೆಯಲ್ಲಿ ಪ್ರತಿದಿನ ಹಾಲು ಕರೆಯುವ ಕೆಲಸವಿಲ್ಲ. ನೆಂಟರಿಷ್ಟರ ಮನೆಗೆ ಹೋಗುವಾಗ ಹಾಲು ಕರೆಯುವುದು, ಹುಲ್ಲು ಹಾಕುವುದು ಯಾರು ಎಂಬ ತಲೆಬಿಸಿಯಿಲ್ಲ.
- ಪೇಟೆಯಿಂದ ನಂದಿನಿ ಹಾಲನ್ನು ತರುವ ಬದಲು ತಾಜಾ ದೇಸೀತಳಿಯ ಗೋವಿನ ಹಾಲು ಲಭ್ಯ.
- ಗೋಮೂತ್ರ, ಗೋಮಯ ಬೇಕಾದಾಗ ಲಭ್ಯ.
- ಗೋ ಉತ್ಪನ್ನಗಳನ್ನು ತಯಾರಿಸುವ ಕಿರು ಉದ್ಯಮವನ್ನು ಪ್ರಾರಂಭಿಸಿ ಕೆಲವರಿಗೆ ಉದ್ಯೋಗವನ್ನೂ ಕೊಡಬಹುದು. ಇಂತಹ ಉತ್ಪನ್ನಗಳಿಂದ ಗೋಶಾಲೆಯನ್ನು ಲಾಭದಾಯಕವಾಗಿ ನಡೆಸಲು ಅನುಕೂಲ.
- ತಮ್ಮ ಹೊಲ ಗದ್ದೆಗಳಿಗೆ ಸಾವಯವ ಗೊಬ್ಬರ, ಮನೆಗೆ ವಿಷಮುಕ್ತ ಆಹಾರ. ಭೂಮಿಯ ಫಲವತ್ತತೆ ಕಾಪಾಡಲು ಸಾಧ್ಯ. ಈಗಂತೂ ಸಾವಯವ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಇದೆ.
- ಗೋಬರ್ ಗ್ಯಾಸ್ ಸ್ಥಾವರದಿಂದ ನೇರವಾಗಿ ತಮ್ಮ ಮನೆಗೆ ಪೈಪ್ ಮೂಲಕ ಗ್ಯಾಸ್ ಸರಬರಾಜು ಸಾಧ್ಯ. ಎಲ್‌ಪಿಜಿಗೆ ಕೊಡುವ ಹಣ ಉಳಿತಾಯ.
- ಹೆಚ್ಚು ಗ್ಯಾಸ್ ಇದ್ದಲ್ಲಿ ವಿದ್ಯುತ್ ಉತ್ಪಾದನೆಯೂ ಸಾಧ್ಯ.

# ಡಾ. ಎಂ. ಎಂ. ಕಲಬುರ್ಗಿ ಕುಟುಂಬದವರಿಗೆ ಆರೆಸ್ಸೆಸ್‌ನಿಂದ ಸಾಂತ್ವನ

ಆರೆಸ್ಸೆಸ್‌ನ ಕರ್ನಾಟಕ ಉತ್ತರ ಪ್ರಾಂತ ಸಹಕಾರ್ಯವಾಹ ಶ್ರೀಧರ ನಾಡಿಗೇರ ಧಾರವಾಡದ ಡಾ.ಎಂ.ಎಂ.ಕಲಬುರ್ಗಿಯವರ ಮನೆಗೆ ಇತ್ತೀಚೆಗೆ ಭೇಟಿ ನೀಡಿ ದಿವಂಗತರ ಪತ್ನಿ ಉಮಾದೇವಿ ಮತ್ತು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಶ್ರೀಧರ ನಾಡಿಗೇರ ಅವರು, ಆರ್‌ಎಸ್‌ಎಸ್‌ನ ಪ್ರಧಾನ ಕಾರ್ಯಾಲಯ ಮುಖ್ಯಸ್ಥ ವಿಕಾಸ ತೇಲಂಗ್ ಅವರು ನೀಡಿದ ಸಾಂತ್ವನ ಪತ್ರ ನೀಡಿದರು.

ರಾಂಚಿಯಲ್ಲಿ ಅ. 30 ರಿಂದ ನ. 1 ರವರೆಗೆ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಕಾರ್ಯಕಾರಿ ಮಂಡಲ ಬೈಠಕ್‌ನಲ್ಲಿ ಗಣ್ಯರಿಗೆ ಸಂತಾಪ ಸೂಚಿಸಲಾಗಿತ್ತು. ಸಂಘದ ಸಂಪ್ರದಾಯದಂತೆ ಮೃತರ ಮನೆಗೆ ಭೇಟಿ ನೀಡಿ ಶ್ರದ್ಧಾಂಜಲಿ ಪತ್ರ ಅರ್ಪಿಸಲಾಗುತ್ತಿದೆ. ಸಮಾಜದಲ್ಲಿ ಭಿನ್ನ ವಿಚಾರಧಾರೆ ಇದ್ದರೂ ಸಂಘ ದೇಶದ ಏಕತೆಗಾಗಿ ಕಾರ್ಯನಿರ್ವಹಿಸುತ್ತಿದೆ. ಕಲಬುರ್ಗಿಯವರ ಹತ್ಯೆ ಶೋಚನೀಯ. ಆ ನೋವು ಅವರ ಕುಟುಂಬಕ್ಕೂ, ಸಾಹಿತ್ಯ ವಲಯಕ್ಕೂ ಶಾಶ್ವತ. ಘಟನೆ ಬಗ್ಗೆ ತನಿಖೆ ನಡೆಯುತ್ತಿದ್ದು, ಸತ್ಯ ಹೊರಬೀಳಲಿದೆ ಎಂದರು.

# ಪಶ್ಚಿಮದ ದೇಶಗಳ ಕಿವಿ ಹಿಂಡಿದ ಪ್ರಧಾನಿ

ಜಾಗತಿಕವಾಗಿ ತೀವ್ರವಾಗಿ ಬದಲಾವಣೆಗೊಂಡಿರುವ ಹವಾಮಾನಕ್ಕೆ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳೇ ನೇರ ಕಾರಣ. ಈ ಸಮಸ್ಯೆಗೆ ಭಾರತ ಬಲಿಪಶುವಾಗಿದೆ. ಆದ್ದರಿಂದ, ಹವಾಮಾನ ಬದಲಾವಣೆ ಸಮಸ್ಯೆ ವಿರುದ್ಧ ಹೋರಾಡುವ ನಿಟ್ಟಿನಲ್ಲಿ ಆ ರಾಷ್ಟ್ರಗಳು ಹೆಚ್ಚಿನ ಮುತುವರ್ಜಿ ವಹಿಸಬೇಕಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಪ್ಯಾರಿಸ್‌ನಲ್ಲಿ ಇತ್ತೀಚೆಗೆ ನಡೆದ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಕುರಿತ 150 ವಿಶ್ವನಾಯಕರ ಸಮಾವೇಶದಲ್ಲಿ ಮಾತನಾಡಿದರು. ಹವಾಮಾನ ವೈಪರೀತ್ಯ ತಡೆಗಟ್ಟುವುದು ಜಾಗತಿಕ ಮಟ್ಟದ ಅತ್ಯಂತ ಪ್ರಮುಖ ಸವಾಲು. ಆದರೆ ಇದಕ್ಕೆ ಭಾರತ ಕಾರಣವಲ್ಲ. ಬದಲಿಗೆ ಕೈಗಾರಿಕಾ ಕ್ರಾಂತಿಯ ನಂತರದಲ್ಲಿ ಶ್ರೀಮಂತವಾದ, ಅಭಿವೃದ್ಧಿ ಸಾಧಿಸಿದ ರಾಷ್ಟ್ರಗಳು ಹುಟ್ಟುಹಾಕಿರುವ ಸಮಸ್ಯೆ ಇದು ಎಂದು ಹೇಳುವ ಮೂಲಕ ಹವಾಮಾನ ಬದಲಾವಣೆ ಸಮಸ್ಯೆ ನೀಗಿಸಲು ಭಾರತ ಸೇರಿದಂತೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಹೆಚ್ಚಿನ ಶ್ರಮವಹಿಸಬೇಕೆಂದು ಆಗ್ರಹಿಸುತ್ತಿರುವ ಜಾಗತಿಕ ನಾಯಕತ್ವದ ಕಿವಿ ಹಿಂಡಿದರು.

ಜಗತ್ತಿನ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾ ಮತ್ತು ಭಾರತದಂಥ ರಾಷ್ಟ್ರಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಅವೈಜ್ಞಾನಿಕ ಪದ್ಧತಿಗಳೇ ಹವಾಮಾನ ವೈಪರೀತ್ಯಕ್ಕೆ ಕಾರಣ ಎಂಬ ಅಪವಾದ ಮುಂದುವರಿದ ರಾಷ್ಟ್ರಗಳದ್ದು.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಂದಾಗಿ ಉದ್ಭವಿಸಿರುವ ಈ ಸಮಸ್ಯೆಗೆ ಭಾರತ ಬಲಿಪಶುವಾಗಿದೆ. ನಮ್ಮ ರೈತರು ನಾನಾ ಬಗೆಯ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಸಮುದ್ರದ ನೀರಿನ ಮಟ್ಟ ಹೆಚ್ಚಾಗುತ್ತಿರುವುದರಿಂದ 7,500 ಕಿ.ಮೀ.ನಷ್ಟು ಉದ್ದವಿರುವ ನಮ್ಮ ಸಮುದ್ರ ತಟದಲ್ಲಿ ನೆಲೆಸಿರುವ ಜನರು ಆತಂಕಗೊಂಡಿದ್ದಾರೆ. ಜೀವನದಿಗಳಿಗೆ ನೀರು ಹರಿಸುವ ಹಿಮ ನೀರ್ಗಲ್ಲುಗಳ ಕರಗುವಿಕೆ ಬಗ್ಗೆ ಆತಂಕ ಎದುರಾಗಿದೆ ಎಂದು ಪ್ರಧಾನಿ ವಿವರಿಸಿದರು.

**ರಾಷ್ಟ್ರೀಯ ಸ್ವಯಂಸೇವಕ ಸಂಘ - ಕರ್ನಾಟಕ**
# 74, ಕೇಶವಕೃಪ, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು – 560 004
Ph. : 080-26610081 www.samvada.org, karnatakarss@gmail.com

ಡಿಸೆಂಬರ್ 5, 2015

**ಸಮಾಜ ಬಾಂಧವರಲ್ಲಿ ಒಂದು ಮನವಿ.**

ಕಳೆದ ಏಳೆಂಟು ದಿನಗಳಿಂದ ಸುರಿಯುತ್ತಿರುವ ಕುಂಭದ್ರೋಣ ಮಳೆಯ ನಿಮಿತ್ತ ಉಂಟಾದ ಪ್ರವಾಹಕ್ಕೆ ನೆರೆಯ ತಮಿಳುನಾಡಿನ ಚೆನ್ನೈ ನಗರ ಸೇರಿದಂತೆ ಸುತ್ತು ಮುತ್ತಲ ಕಾಂಚಿಪುರಂ, ತಿರುವಳ್ಳೂರ್ ಮತ್ತು ಕಡಲೂರ್ ಜಿಲ್ಲೆಗಳು ನಲುಗಿ ಹೋಗಿದೆ. ಸಾಂಸ್ಕೃತಿಕ ಶ್ರೀಮಂತಿಕೆಯ ಈ ನಾಡಿನಲ್ಲಿ ಪ್ರಾಚೀನ ಸ್ಮಾರಕಳು, ದೇಗುಲಗಳು ಸೇರಿದಂತೆ ರಸ್ತೆ-ಶಾಲೆ-ಆಸ್ಪತ್ರೆ-ಅಂಗಡಿಗಳು ಜಲಾವೃತಗೊಂಡಿದೆ. 325ಕ್ಕೂ ಹೆಚ್ಚು ಮಂದಿ ಮೃತ ಪಟ್ಟಿದ್ದಾರೆ. ಲಕ್ಷಾಂತರ ಜನರು ಈ ಪ್ರಾಕೃತಿಕ ವಿಕೋಪದಿಂದ ಸಂತ್ರಸ್ತರಾಗಿದ್ದಾರೆ.

ಜನಜೀವನ ಅಸ್ತವ್ಯಸ್ತಗೊಂಡಿದೆ. ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿ-ಪಾಸ್ತಿ ನಷ್ಟವಾಗಿದೆ. ಭಾರತದ ಸರಕಾರ ಮತ್ತು ದೇಶದ ಜನತೆ ತಕ್ಷಣ ಸ್ಪಂದಿಸಿದೆ. ಆರೆಸ್ಸೆಸ್ ಸ್ವಯಂಸೇವಕರೂ ಈಗಾಗಲೇ ಪರಿಹಾರ ಕಾರ್ಯಾಚರಣೆಗೆ ಮುಂದಾಗಿದ್ದಾರೆ. **ಸೇವಾಭಾರತಿ** ಅಲ್ಲಲ್ಲಿ ಸಹಾಯಕೇಂದ್ರಗಳನ್ನು ಆರಂಭಿಸಿದೆ. ಸಾವಿರಾರು ನೊಂದ ಜೀವಗಳಿಗೆ ಆಸರೆಯಾಗಿದ್ದಾರೆ. ಸಂತ್ರಸ್ತ ನಾಗರಿಕರ ಬದುಕು ದುಸ್ತರವಾಗಿದೆ. ಅಲ್ಲಿನ ಸಂತ್ರಸ್ತರಿಗೆ ಇದೀಗ ಮಾನವೀಯ ನೆರವು ಅವಶ್ಯವಿದ್ದು ಸಮಾಜ ಬಾಂಧವರೆಲ್ಲರೂ ಅಲ್ಲಿನ ಜನರ ಬದುಕನ್ನು ಮತ್ತೆ ಕಟ್ಟಿಕೊಡುವಲ್ಲಿ ಸಹಕರಿಸಬೇಕಿದೆ. ಆರ್ಥಿಕ ಧನಸಹಾಯವನ್ನು ದೇಣಿಗೆ ರೂಪದಲ್ಲಿ ನೀಡಿ ಸಹಕರಿಸಬೇಕು ಹಾಗೂ ಅಲ್ಲಿನ ಜನತೆಗೆದುರಾಗಿರುವ ಈ ಹಠಾತ್ ಸಂಕಷ್ಟವನ್ನು ನಿವಾರಿಸಲು ನಮ್ಮೊಂದಿಗೆ ಕೈ ಜೋಡಿಸಬೇಕೆಂದು ಕಳಕಳಿಯ ವಿಜ್ಞಾಪನೆಗಳು.



FOR ONLINE TRANSFER:
"RSS Sanchaalita Santrasta Parihaara Nidhi"
SB Account Number : 0789101009327,
IFSC Code: CNRB0000789 Canara Bank,
Kempegouda Nagar Branch,
(Near Chamarajapet Uma Theater)
Bangaluru -560018

ಆರೆಸ್ಸೆಸ್ ಸಂಚಾಲಿತ ಸಂತ್ರಸ್ತ ಪರಿಹಾರನಿಧಿ
'RSS Sanchalita Santrasta Parihara Nidhi'
ಹೆಸರಿನಲ್ಲಿ ಚೆಕ್/ಡಿ.ಡಿಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕೆಂದು ಕೋರುತ್ತೇವೆ

"ಕೇಶವ ಕೃಪಾ"
ಆರೆಸ್ಸೆಸ್ ಕಛೇರಿ
#74, ರಂಗರಾವ್ ರಸ್ತೆ
ಶಂಕರಪುರಂ, ಬೆಂಗಳೂರು-560004
ದೂರವಾಣಿ:080-26610081

"ಕೇಶವ ಕುಂಜ"
ಆರೆಸ್ಸೆಸ್ ಕಛೇರಿ
ಲೋಕಮಾನ್ಯ ತಿಲಕ್ ರಸ್ತೆ
ಗೋಕುಲ ರಸ್ತೆ, ಹುಬ್ಬಳ್ಳಿ
ದೂರವಾಣಿ : 0836-2232972

ನಿಮ್ಮ ಉದಾರ ನೆರವಿನ ನಿರೀಕ್ಷೆಯಲ್ಲಿ

ವಿ. ನಾಗರಾಜ್
ಕ್ಷೇತ್ರೀಯ ಸಂಘಚಾಲಕರು, ಆರೆಸ್ಸೆಸ್

ನೀವು ಇಂಟರ್‌ನೆಟ್ ಮೂಲಕ
ಅಥವಾ ಅಂಚೆ ಮೂಲಕ ಚೆಕ್/ಡಿಡಿ ಕಳುಹಿಸಿದರೆ
ಆ ಕುರಿತು 9448847866 ಅಥವಾ
karnatakarss@gmail.com ಗೆ
ಇ-ಮೈಲ್ ಮೂಲಕ ದಯವಿಟ್ಟು ತಿಳಿಸಿ.

www.samvada.org

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04.
ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ ವಿವರ ಮತ್ತು ವಿಳಾಸ ಬದಲಾವಣೆಗಾಗಿ : 97391 83021
ಸಂಪಾದಕೀಯ : 97312 64009